**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/ಚುನಾವಣೆ/ಡೆಲಿಗೇಟ್/26(3)/2014

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ
ಕಟ್ಟಡ, ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ(ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು–560004 ದಿನಾಂಕ:13.03.2014

**ಗೆ,**

1) ಜಿಲ್ಲಾಧಿಕಾರಿಗಳು

----------------

----------------

2) ಸಹಕಾರ ಸಂಘಗಳ ಜಂಟಿ ನಿಬಂಧಕರು

-------------- ಪ್ರಾಂತ್ಯ

---------------

ಮಾನ್ಯರೇ,

**ವಿಷಯ:–** ಮಾಧ್ಯಮಿಕ ಹಾಗೂ ಫೆಡರಲ್ ಸಹಕಾರ ಸಂಘಗಳಿಗೆ ಆಡಳಿತ ಮಂಡಲಿ ಚುನಾವಣೆ –ಪ್ರತಿನಿಧಿ /ಡೆಲಿಗೇಟ್‌ಗಳನ್ನು ಕಳುಹಿಸುವಿಕೆ – ನಿಗಧಿತ ಡೆಲಿಗೇಟ್ ನಮೂನೆಗಳಲ್ಲಿ ವಿವರಗಳನ್ನು ಸಲ್ಲಿಸುವ ಕುರಿತು.

**ಉಲ್ಲೇಖ:–**
1) ಆಯೋಗದ ಸುತ್ತೋಲೆ ಸಂಖ್ಯೆ:ಸಚುಆ/ಚುನಾವಣೆ/ಡೆಲಿಗೇಟ್/ 26/2013–14
2) ಆಯೋಗದ ಸುತ್ತೋಲೆ ಸಂಖ್ಯೆ:ಸಚುಆ/ಚುನಾವಣೆ/ ಡೆಲಿಗೇಟ್/ 26(1)/2013–14, ದಿನಾಂಕ:12.12.2013
3) ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ರವರ ಕಛೇರಿಯಲ್ಲಿ ನಡೆದ ಎಂ.ಎಂ.ಆರ್ ಸಭೆಯಲ್ಲಿನ ಚರ್ಚೆ.

***

ಪ್ರಸ್ತುತ ವಿಷಯ ಮತ್ತು ಉಲ್ಲೇಖದ ಕಡೆಗೆ ಗಮನ ಹರಿಸಲು ಕೋರಿದೆ.

ಸಹಕಾರ ಚುನಾವಣಾ ಆಯೋಗವು ಮಾಧ್ಯಮಿಕ, ಫೆಡರಲ್ ಹಾಗೂ ಅಪೆಕ್ಸ್ ಸಂಘಗಳ ಆಡಳಿತ ಮಂಡಲಿಗಳಿಗೆ ಚುನಾವಣೆ ನಡೆಸುವ ಸಂಬಂಧ ಈಗಾಗಲೇ ದಿನಾಂಕ:16.01.2014ರಂದು ಅಧಿಸೂಚನೆಯನ್ನು ಹೊರಡಿಸಿ ಚುನಾವಣಾ ಅವಧಿ /ದಿನಾಂಕಗಳನ್ನು ನಿಗಧಿಪಡಿಸಿದೆ ಅಲ್ಲದೇ ಪ್ರತಿ ವರ್ಗದ ಸಹಕಾರ ಸಂಘಗಳ ಚುನಾವಣೆಯನ್ನು ನಡೆಸುವ ಸಂಬಂಧ ಜಿಲ್ಲಾ ಚುನಾವಣಾಧಿಕಾರಿಗಳನ್ನು ಈಗಾಗಲೇ ನೇಮಿಸಲಾಗಿದೆ. ಆಯೋಗವು ಪ್ರಕಟಿಸಿರುವ ಅಧಿಸೂಚನೆಯಂತೆ, ಏಪ್ರಿಲ್ 2014 ಮತ್ತು ಮೇ 2014ರ ಮಾಹೆಗಳಲ್ಲಿ ಕ್ರಮವಾಗಿ ಮಾಧ್ಯಮಿಕ ಹಾಗೂ ಫೆಡರಲ್ ಸಂಘಗಳ ಮಂಡಲಿ ಚುನಾವಣೆಗಳನ್ನು ನಡೆಸಬೇಕಾಗಿರುತ್ತದೆ. ಮಾಧ್ಯಮಿಕ ಹಾಗೂ ಫೆಡರಲ್ ಸಂಘಗಳ ಚುನಾವಣೆಗಳನ್ನು ನಡೆಸುವ ಸಂಬಂಧ ಸದಸ್ಯ ಸಂಘಗಳು ಪ್ರತಿನಿಧಿ /ಡೆಲಿಗೇಟ್‌ಗಳನ್ನು ಕಳುಹಿಸುವ ಕುರಿತು ಹಾಗೂ ಪ್ರತಿನಿಧಿ /ನಾಮನಿರ್ದೇಶಕನು ಮತ ಚಲಾಯಿಸುವ ರೀತಿಯ ಕುರಿತಂತೆ ಆಯೋಗವು ಉಲ್ಲೇಖಿತ (1) ಮತ್ತು (2) ರ ಸುತ್ತೋಲೆಗಳಲ್ಲಿ ಈಗಾಗಲೇ ಮಾರ್ಗದರ್ಶನವನ್ನು ನೀಡಿದೆ. ಡೆಲಿಗೇಟ್ ನಮೂನೆಗಳ ಕುರಿತಂತೆ ಪ್ರಸ್ತುತ ಪ್ರಸ್ತಾಪಿಸಲಾಗಿದೆ.

---2

ಬೆಂಗಳೂರು ಪ್ರಾಂತ್ಯದ ಜಂಟಿ ನಿಬಂಧಕರ ಕಛೇರಿಯಲ್ಲಿ ಇತ್ತೀಚಿಗೆ ನಡೆದ ಎಂ.ಎಂ.ಆರ್ ಸಭೆಯಲ್ಲಿ ಚುನಾವಣಾ ವಿಷಯ ಕುರಿತಂತೆ ಚರ್ಚೆ ನಡೆದು, ಚರ್ಚೆಯಲ್ಲಿ ಆಯೋಗದ ಜಂಟಿ ನಿಬಂಧಕರು ಪಾಲ್ಗೊಂಡಾಗ, ಹಲವು ಅಧಿಕಾರಿಗಳಿಗೆ ಸದಸ್ಯ ಸಂಘಗಳು ಪ್ರತಿನಿಧಿ ಕಳುಹಿಸುವ ವಿಚಾರದಲ್ಲಿ ಗೊಂದಲ ಇರುವ ಬಗ್ಗೆ ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ಕೆಳಕಂಡ ಅಂಶಗಳ ಬಗ್ಗೆ ಸೂಚನೆಗಳನ್ನು ಪಾಲಿಸುವ ಕುರಿತು ಸ್ಪಷ್ಟಪಡಿಸಲಾಗಿದೆ.

1. 2014ನೇ ಏಪ್ರಿಲ್ ಮತ್ತು ಮೇ ಮಾಹೆಗಳಲ್ಲಿ ಕ್ರಮವಾಗಿ ಮಾಧ್ಯಮಿಕ ಹಾಗೂ ಫೆಡರಲ್ ಸಂಘಗಳ ಆಡಳಿತ ಮಂಡಲಿ ಚುನಾವಣೆಗಳು ಜರುಗಲಿದೆ.
2. ಮಾಧ್ಯಮಿಕ ಸಹಕಾರ ಸಂಘಗಳ ಚುನಾವಣೆಗಳ ಸಂಬಂಧ ಆಯೋಗವು ಈ ಮೇಲ್‌ನಲ್ಲಿ ಕಳುಹಿಸಿರುವ ಡೆಲಿಗೇಟ್ ಫಾರಂಗಳನ್ನು ಉಪಯೋಗಿಸಲು ಸೂಚಿಸಿದೆ.
3. ಫೆಡರಲ್ ಸಹಕಾರ ಸಂಘಗಳಿಗೆ ಸಂಬಂಧಸಿದಂತೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳೇ ಜಿಲ್ಲಾ ಚುನಾವಣಾಧಿಕಾರಿಯಾಗಿರುತ್ತಾರೆ. ಫೆಡರಲ್ ಸಂಘಗಳಾದ ಡಿ.ಸಿ.ಸಿ ಬ್ಯಾಂಕುಗಳು, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳು ಹಾಗೂ ಪ್ರಾದೇಶಿಕ ಎಣ್ಣೆ ಬೀಜ ಬೆಳೆಗಾರರ ಒಕ್ಕೂಟ ನಿ.,ಗಳ ಆಡಳಿತ ಮಂಡಲಿ ಚುನಾವಣೆಗೆ ಸಂಬಂಧಿಸಿದಂತೆ ಆಯೋಗವೇ ಡೆಲಿಗೇಟ್ ನಮೂನೆಗಳನ್ನು ಸಿದ್ಧಪಡಿಸಿ ಸಂಬಂಧಿಸಿದ ಜಿಲ್ಲಾ ಚುನಾವಣಾಧಿಕಾರಿಗಳಿಗೆ ರವಾನಿಸಲಾಗುತ್ತದೆ. ಉಳಿದಂತೆ ಇತರ ಫೆಡರಲ್ ಸಂಘಗಳಿಗೆ ಸಂಬಂಧಿಸಿದಂತೆ ಇ–ಮೇಲ್ ಮೂಲಕ ಕಳುಹಿಸಲಾದ ನಮೂನೆಯನ್ನೇ ಉಪಯೋಗಿಸಲು ಸೂಚಿಸಿದೆ.
4. ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟ ಡಿ.ಸಿ.ಸಿ ಬ್ಯಾಂಕು ಹಾಗೂ ಕೆ.ಓ.ಎಫ್. ಗೆ ಸಂಬಂಧಿಸಿದಂತೆ ಜಿಲ್ಲಾ ಚುನಾವಣಾಧಿಕಾರಿಯವರು ಡೆಲಿಗೇಟ್ ಫಾರಂಗಳನ್ನು ಸಂಬಂಧಿಸಿದ ಫೆಡರಲ್ ಸಂಘಗಳ ಸದಸ್ಯ ಸಂಘಗಳಿಗೆ ತಲುಪಿಸುವ ವಿಷಯವಾಗಿ ಒಬ್ಬರು ನೋಡಲ್ ಅಧಿಕಾರಿಯನ್ನು ನೇಮಕ ಮಾಡುವಂತೆ ಸೂಚಿಸಿದೆ. ಹೀಗೆ ನೇಮಿಸಲಾಗುವ ನೋಡಲ್ ಅಧಿಕಾರಿಯ ಕರ್ತವ್ಯ / ಜವಾಬ್ದಾರಿಗಳು ಈ ಕೆಳಕಂಡಂತೆ ಇರುತ್ತದೆ.

   i. ನೋಡಲ್ ಅಧಿಕಾರಿಯು ಫೆಡರಲ್ ಸಂಘಗಳ ಸದಸ್ಯರಾಗಿರುವ ಸಂಘಗಳ (ಈ ಸಂಘಗಳೇ ಜಿಲ್ಲಾ ಬ್ಯಾಂಕು /ಹಾಲು ಒಕ್ಕೂಟಗಳ ಮತದಾರರಾಗಿರುತ್ತಾರೆ) ಕುರಿತಂತೆ ತಿಳುವಳಿಕೆ ಹೊಂದಿರಬೇಕಾಗಿರುತ್ತದೆ.

   ii. ನೋಡಲ್ ಅಧಿಕಾರಿಯು ಜಿಲ್ಲಾ ಚುನಾವಣಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ಫೆಡರಲ್ ಸಂಘಗಳ ಕರಡು ಅರ್ಹ ಮತದಾರರ ಪಟ್ಟಿಯನ್ನು ಖುದ್ದಾಗಿ 20.03.2014 ರಿಂದ 25.03.2014 ರೊಳಗೆ ಆಯೋಗಕ್ಕೆ ಸಲ್ಲಿಸಿ ಆಯೋಗವು ಡೆಲಿಗೇಟ್ ನಮೂನೆಗಳನ್ನು ಸಿದ್ಧಪಡಿಸುವುದಕ್ಕೆ ಅವಕಾಶ ಮಾಡತಕ್ಕದ್ದು.

   iii. ಆಯೋಗವು ಡೆಲಿಗೇಟ್ ನಮೂನೆಗಳನ್ನು ಸಿದ್ದಪಡಿಸಿದ ನಂತರ ನೋಡಲ್ ಅಧಿಕಾರಿಯು, ನಮೂನೆಗಳನ್ನು ಪರಿಶೀಲಿಸಿ ಸಂಬಂಧಿಸಿದ ಎಲ್ಲಾ ಅರ್ಹ ಮತದಾರರ ಸಹಕಾರ ಸಂಘಗಳ ಹೆಸರು ಸಮರ್ಪಕವಾಗಿ ಡೆಲಿಗೇಟ್ ನಮೂನೆಯಲ್ಲಿ ಇದೆಯೇ? ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಒಂದು ವೇಳೆ ನಮೂನೆಗಳಲ್ಲಿನ ಅರ್ಹ ಮತದಾರರಾದ ಸದಸ್ಯ ಸಂಘಗಳ ಹೆಸರು ಸರಿಯಾಗಿ ಅಚ್ಚು ಆಗದೇ ಇದ್ದಲ್ಲಿ ಅದನ್ನು ಸರಿಪಡಿಸಿಕೊಳ್ಳತಕ್ಕದ್ದು ಮತ್ತು ಮುದ್ರಿತವಾದ ಅರ್ಹ ಮತದಾರರಾದ ಎಲ್ಲಾ ಸದಸ್ಯ ಸಂಘಗಳ ಡೆಲಿಗೇಟ್ ನಮೂನೆಗಳನ್ನು ಖುದ್ದಾಗಿ ಆಯೋಗದಿಂದ ಪಡೆದು ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

---3

5. ನೋಡಲ್ ಅಧಿಕಾರಿಯಿಂದ ಡೆಲಿಗೇಟ್ ನಮೂನೆಗಳನ್ನು ಪಡೆದ ನಂತರ ಜಿಲ್ಲಾ ಚುನಾವಣಾಧಿಕಾರಿಯು, ಸದರಿ ಡೆಲಿಗೇಟ್ ನಮೂನೆಗಳನ್ನು ಸಂಬಂಧಿಸಿದ ಅರ್ಹ ಮತದಾರರ ಸಂಘಗಳ ಮುಖ್ಯಕಾರ್ಯನಿರ್ವಾಹಕರಿಗೆ ವಿತರಿಸುವ ಬಗ್ಗೆ ಕ್ರಮವಿಡತಕ್ಕದ್ದು ಹಾಗೂ ಸದರಿ ಡೆಲಿಗೇಟ್ ನಮೂನೆಗಳು ಅರ್ಹ ಮತದಾರರ ಸದಸ್ಯ ಸಂಘದ ಮುಖ್ಯ ಕಾರ್ಯನಿರ್ವಾಹಕರಿಗೆ ತಲುಪಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ಮೇಲ್ಕಂಡ ಸೂಚನೆಗಳನ್ನು ತಪ್ಪದೇ ಪಾಲಿಸುವಂತೆ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು

<u>ಪ್ರತಿಗಳು:–</u>

1. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರು, ಸೂಕ್ತ ಕ್ರಮಕ್ಕಾಗಿ
2. ಎಲ್ಲಾ ಉಪವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರು
3. ಸಂಬಂಧಿಸಿದ ಮಾಧ್ಯಮಿಕ /ಫೆಡರಲ್ ಸಂಘಗಳ ವ್ಯವಸ್ಥಾಫಕ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ

<u>ಪ್ರತಿಯನ್ನು:</u>

4. ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹು ಅಂತಸ್ತುಗಳ ಕಟ್ಟಡ, ಬೆಂಗಳೂರು – 560001
5. ಸಹಕಾರ ಸಂಘಗಳ ನಿಬಂಧಕರು, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು
6. ಸಹಕಾರ ಸಂಘಗಳ ನಿಬಂಧಕರ ಕಛೇರಿಯಲ್ಲಿನ ಎಲ್ಲಾ ಅಪರ ನಿಬಂಧಕರಿಗೆ————————
7. ಸಹಕಾರ ಸಂಘಗಳ ನಿಬಂಧಕರು ಕಛೇರಿಯ ಎಲ್ಲಾ ಜಂಟಿ ನಿಬಂಧಕರುಗಳಿಗೆ ————————
8. ರಕ್ಷಾ ಕಡತ